ಕರ್ನಾಟಕ ಸರ್ಕಾರ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.211/2014**

ಪಿ.ಡಬ್ಲ್ಯೂಃ **3**

ಸಿ.ಡಬ್ಲ್ಯೂಃ 6

| | |
|---|---|
| ಹೆಸರು | ಃ ಜಿ. ಟಿ.ಗುರುಮೂರ್ತಿ |
| ತಂದೆಯ ಹೆಸರು | ಃ ತಿಮ್ಮೇಗೌಡ |
| ವಯಸ್ಸು | ಃ 55 ವರ್ಷ |
| ಉದ್ಯೋಗ | ಃ ಟ್ರಾಫೀಕ್ ದಾಪೇದಾರ್ |
| ವಾಸಸ್ಥಳ | ಃ ಚಿಕ್ಕಮಗಳೂರು |

**ದಿನಾಂಕಃ 06-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

**1999** ರಿಂದ **2003** ರವರೆಗೆ ನಾನು ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪೊಲೀಸ್ ಪೇದೆಯಾಗಿ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ 14-07-2001 ರಂದು ಚಾಸಾ-1 ರವರಿಗೆ ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿರುವಾಗ ಬಾತ್ಮಿದಾರರಿಂದ ಖಚಿತ ವರ್ತಮಾನ ಬಂದ ಮೇರೆಗೆ ಚಾಸಾ-1 ರವರು ಸದರಿ ವಿಚಾರವನ್ನು ಸಿಬ್ಬಂಧಿಗಳಾದ ನನಗೂ ಹಾಗೂ ಚಾಸಾ-5 ಮತ್ತು 7 ರವರಿಗೆ ತಿಳಿಸಿ, ನಮ್ಮನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ರಂಗೇನಹಳ್ಳಿಯ ಬಸ್ ನಿಲ್ದಾಣಕ್ಕೆ ಹೋಗಿ ಅಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಪರಿಚಯ ಮಾಡಿಕೊಂಡು ಅವರಿಗೆ ವಿಚಾರ ತಿಳಿಸಿ ಮಹಜರ್ ಗೆ ಸಹಕರಿಸಲು ಕೋರಿಕೊಂಡಿದ್ದು, ಅವರು ಒಪ್ಪಿದ ಮೇರೆಗೆ ಅವರಿಗೆ ನೋಟೀಸ್ ಜಾರಿ ಮಾಡಿ ಅವರನ್ನು ನಮ್ಮ ಜೊತೆಯಲ್ಲಿ ಕರೆದುಕೊಂಡು ರಂಗೇನಹಳ್ಳಿಯ ಕೆಳಗಿನ ಬಸ್ ಸ್ಟಾಂಡ್ ನಲ್ಲಿ ಕಾಯುತ್ತಿದ್ದೇವು. ರಾತ್ರಿ 2-00 ಗಂಟೆ ಸಮಯಕ್ಕೆ ತರೀಕೆರೆ ಕಡೆಯಿಂದ ಒಂದು ಹಸಿರು ಬಣ್ಣದ ಅಂಬಾಸಿಡರ್ ಕಾರ್ ನಂ.ಕೆಎ 13 20 ಬಂದಿದ್ದು, ಅದನ್ನು ತಡೆದು ನಿಲ್ಲಿಸಿದಾಗ, ಸದರಿ ವಾಹನದಲ್ಲಿದ್ದ 5 ಜನರು ವಾಹನದಿಂದ ಇಳಿದು ಓಡಿ ಹೋಗಲು ಪ್ರಯತ್ನಿಸಿದ್ದು, ಸಿಬ್ಬಧಿಗಳು ಮೂರು ಜನರನ್ನು ಹಿಡಿದಿದ್ದು, ಇಬ್ಬರು ಓಡಿ ಹೋಗಿರುತ್ತಾರೆ. ಸಿಬ್ಬಂಧಿಗಳು

ಹಿಡಿದುಕೊಂಡ ಮೂರು ಜನರನ್ನು ಅವರ ಹೆಸರು, ವಿಳಾಸ ಕೇಳಲಾಗಿ, ಸತೀಶ್ ಕುಮಾರ್ ಬಿನ್ ಜತ್ತಪ್ಪ, ಅಬ್ದುಲ್ ರೆಹಮಾನ್ ಬಿನ್ ಇಬ್ರಾಹಿಂ, ಮಡಿಕೇರಿ ವಾಸಿ, ಇನ್ನೊಬ್ಬರು ಮನೋಜ್ ಬಿನ್ ತಂಗಜನ್, ವಾಸ ತಿರುಚೂರು ತಮಿಳುನಾಡು ಎಂದು ತಿಳಿಸಿದ್ದು, ಮತ್ತು ಓಡಿ ಹೋದವರ ಹೆಸರು ವಿಳಾಸವನ್ನು ಪಂಚರ ಹತ್ತಿರ ಕೇಳಲಾಗಿ ಅವರ ಹೆಸರು ಅಬ್ದುಲ್ ಮಜೀದ್ ಬಿನ್ ಇಬ್ರಾಹಿಂ, ಕೇರಳವಾಸಿ, ಇನ್ನೊಬ್ಬರು ಅಶ್ರಫ್ ಬಿನ್ ಮಹಮ್ಮದ್ ಎಂದು ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ರಾತ್ರಿ 3-00 ರಿಂದ 3-30 ಗಂಟೆಯವರೆಗೂ ಮಹಜರ್ ಕ್ರಮವನ್ನು ಜರುಗಿಸಿ, ಸದರಿ ಅಂಬಾಸಿಡರ್ ಹಸಿರು ಬಣ್ಣದ ಕಾರನ್ನು ವಶಪಡಿಸಿಕೊಂಡಿರುತ್ತೇವೆ. ಸದರಿ ಕಾರನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಯಾವುದೇ ವಸ್ತುಗಳು ಇರುವುದಿಲ್ಲ ಹಾಗೂ ಯಾವುದೇ ದಾಖಲಾತಿಗಳು ಕಂಡುಬಂದಿರುವುದಿಲ್ಲ. ಸದರಿ ಕಾರನ್ನು ಕಳ್ಳತನ ಮಾಡಿಕೊಂಡು ಬಂದಿರಬಹುದು ಅನುಮಾನ ಬಂದು ಅದನ್ನು ಚಾಸಾ-1 ರವರು ಸಿಬ್ಬಂಧಿಗಳಾದ ನಮ್ಮಗಳ ಸಮ್ಮುಖ ಹಾಗೂ ಪಂಚರ ಸಮಕ್ಷಮ ಸದರಿ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ 3-30 ಗಂಟೆ ಸಮಯಕ್ಕೆ ಕಾರು ಮತ್ತು ಆರೋಪಿತರನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಬಂದು ಸಿಪಿಐ ರವರ ಮಾರ್ಗದರ್ಶನದಂತೆ ಮುಂದಿನ ಕ್ರಮ ಕೈಗೊಂಡಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ.**

ಆರೋಪಿ ಮನೋಜ್ ಬಿನ್ ತಂಗಪ್ಪ ಇತನ ಮೇಲೆ ನ್ಯಾಯಾಲಯವು ಉದ್ಘೋಷಣಾ ಹಾಗೂ ಜಪ್ತಿ ಆದೇಶವನ್ನು ಹೊರಡಿಸಿರುತ್ತದೆ. ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**